ಸುವರ್ಣ ಕೆ.ಎಂ.ಪಿ. 2007-08

ಕರ್ನಾಟಕ ಸರ್ಕಾರ

ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ-22.

KARNATAKA INSTITUTE OF MEDICAL SCIENCES, HUBLI-22

E-mail : directorkims@rediffmail.com / kims_hubli@rediffmail.com Tel.: 0836 237 3348 Fax: 0836 237 3724 Website : www.kimshubli.org

ಕ್ರಮ. ಸಂಖ್ಯೆ
Ref. No.

ದಿನಾಂಕ
Date

## ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿಯ ಇವರ ನಡವಳಿಗಳು

**ವಿಷಯ:** ಡಾ|| ಆದಮ್‌ಅಲಿ ನದಾಫ್, ಸಹಾಯಕ ಪ್ರಾಧ್ಯಾಪಕರು, ನ್ಯಾಯ ವೈದ್ಯ ಶಾಸ್ತ್ರ ವಿಭಾಗ, ಕಿಮ್ಸ್, ಹುಬ್ಬಳ್ಳಿ ಇವರು ಮಾನ್ಯ ಉಚ್ಛ ನ್ಯಾಯಾಲಯ, ಧಾರವಾಡ ಪೀಠ, ಧಾರವಾಡ ಇಲ್ಲಿ ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ: 66735/2010 ರಲ್ಲಿ ದಿನಾಂಕ: 03-12-2015 ರಂದು ನೀಡಿರುವ ತೀರ್ಪಿನ ಬಗ್ಗೆ.

**ಓದಲಾಗಿದೆ:** 1) ಮಾನ್ಯ ಉಚ್ಛ ನ್ಯಾಯಾಲಯ, ಧಾರವಾಡ ಪೀಠ, ಧಾರವಾಡದ ರಿಟ್ ಅರ್ಜಿ ಸಂಖ್ಯೆ: 66735/2010 ರಲ್ಲಿ ದಿನಾಂಕ 03-12-2015 ರಂದು ನೀಡಿರುವ ತೀರ್ಪು ಮತ್ತು ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ: 100084/2016.

2) ದಿನಾಂಕ: 24-05-2016 ರಂದು ನಡೆದ ಕಿಮ್ಸ್, ಹುಬ್ಬಳ್ಳಿ ಸಂಸ್ಥೆಯ ಇಲಾಖಾ ಮುಂಬಡ್ತಿ ಸಮಿತಿ ಸಭೆ.

- - -

**<u>ಪ್ರಸ್ತಾವನೆ:</u>**

ಮೇಲೆ (1) ರಲ್ಲಿ ಓದಲಾದ ಮಾನ್ಯ ಉಚ್ಛ ನ್ಯಾಯಾಲಯ, ಧಾರವಾಡ ಪೀಠ, ಧಾರವಾಡ ಇಲ್ಲಿ ಡಾ|| ಆದಮ್‌ಅಲಿ ನದಾಫ್, ಸಹಾಯಕ ಪ್ರಾಧ್ಯಾಪಕರು, ನ್ಯಾಯವೈದ್ಯ ಶಾಸ್ತ್ರ ವಿಭಾಗ, ಕಿಮ್ಸ್, ಹುಬ್ಬಳ್ಳಿ ಇವರು ತಮ್ಮ ಪದೋನ್ನತಿಯ ಕುರಿತು ರಿಟ್ ಅರ್ಜಿ ಸಂಖ್ಯೆ: 66735/2010 ನ್ನು ದಾಖಲಿಸಿದ್ದು, ಈ ಸಂಬಂಧದಲ್ಲಿ ದಿನಾಂಕ: 03-12-2015 ರಂದು ಮಾನ್ಯ ನ್ಯಾಯಾಲಯವು ಕೆಳಕಂಡಂತೆ ತೀರ್ಪು ನೀಡಿರುತ್ತದೆ.

> "xxx this petition is hereby allowed. The seniority list dated 02-01-2010, and promotion order dated 01-07-2014 are hereby set aside. The Respondent No.2 is directed to revise the seniority list in accordance with Regulation 19 of the regulations. The Court has also directed Respondent No.2 i.e., Direcor, KIMS, Hubli to reconvene the DPC."

ಮಾನ್ಯ ಉಚ್ಛ ನ್ಯಾಯಾಲಯ, ಧಾರವಾಡ ಪೀಠ, ಧಾರವಾಡ ರವರು ದಿನಾಂಕ: 03-12-2015 ರಲ್ಲಿ ನೀಡಿದ ತೀರ್ಪು ಹಾಗೂ ಈ ಸಂಬಂಧ ದಾಖಲಾದ ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ: 100084/2016 ರ ಮೇರೆಗೆ ಮೇಲೆ (2) ರಲ್ಲಿ ಓದಲಾದಂತೆ ಕಿಮ್ಸ್, ಹುಬ್ಬಳ್ಳಿ ಸಂಸ್ಥೆಯ ಇಲಾಖಾ ಮುಂಬಡ್ತಿ ಸಮಿತಿ ಸಭೆಯನ್ನು ಈ ದಿನ ನಡೆಸಲಾಯಿತು. ಡಾ|| ಸುನೀಲ

..2

Scanned with CamScanner

ಕುಮಾರ್ ಬಿರಾದಾರ್, ಸಹಾಯಕ ಪ್ರಾಧ್ಯಾಪಕರು, ನ್ಯಾಯವೈದ್ಯ ಶಾಸ್ತ್ರ ವಿಭಾಗ ಮತ್ತು ಡಾ|| ಆದಮ್‌ಅಲಿ ನದಾಫ್, ಸಹಾಯಕ ಪ್ರಾಧ್ಯಾಪಕರು, ನ್ಯಾಯವೈದ್ಯ ಶಾಸ್ತ್ರ ವಿಭಾಗ ಇವರುಗಳ ಪದೋನ್ನತಿಗೆ ಸಂಬಂಧಿಸಿದಂತೆ ಸೇವಾ ದಾಖಲಾತಿಗಳನ್ನು ಪರಿಶೀಲಿಸಿ ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ.

1) ಸಂಸ್ಥೆಯು ಒದಗಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಕಿಮ್ಸ್, ಹುಬ್ಬಳ್ಳಿಯ ಸಹಾಯಕ ಪ್ರಾಧ್ಯಾಪಕರ 2016 ರ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಯನ್ವಯ ಡಾ|| ಆದಮ್‌ಅಲಿ ನದಾಫ್ ರವರು ಜ್ಯೇಷ್ಠತೆಯಲ್ಲಿ ಮೊದಲನೇ ಕ್ರಮಾಂಕವನ್ನು ಹೊಂದಿದ್ದು, ಡಾ|| ಸುನೀಲ ಕುಮಾರ್ ಬಿರಾದಾರ್ ರವರು ಎರಡನೇ ಕ್ರಮಾಂಕವನ್ನು ಹೊಂದಿರುತ್ತಾರೆ.

2) ಡಾ|| ಸುನೀಲ ಕುಮಾರ್ ಬಿರಾದಾರ್ ರವರು ಮಂಡಿಸಿದ ವಾದವೇನೆಂದರೆ ಸಂಸ್ಥೆಯು ವರ್ಷಾವಾರು ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಬೇಕಾಗಿದ್ದು, 2011-12 ನೇ ಸಾಲಿನಲ್ಲಿ ಇಲಾಖಾ ಮುಂಬಡ್ತಿ ಸಮಿತಿ ಸಭೆಯು ಜರುಗಿದ ಸಂದರ್ಭದಲ್ಲಿ ತಾವು ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ಹೊಂದಲು ಅರ್ಹರಿದ್ದರೂ ಸಹ ಸಮಿತಿಯು ಪದೋನ್ನತಿಯನ್ನು ನಿರಾಕರಿಸಿರುತ್ತದೆ.

3) ಡಾ|| ಆದಮ್‌ಅಲಿ ನದಾಫ್ ರವರು ಮಂಡಿಸಿರುವ ವಾದವೇನೆಂದರೆ, ದಿನಾಂಕ: 01-07-2014 ರಂದು ಸಹ ಪ್ರಾಧ್ಯಾಪಕರ ಹುದ್ದೆಗೆ ತಾವು ಪದೋನ್ನತಿ ಹೊಂದಲು ಅರ್ಹರಿದ್ದು, ಈ ಸಂಬಂಧದಲ್ಲಿ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯ ರವರು ನಿಗದಿಪಡಿಸಿರುವ ಮಾನದಂಡಗಳ ರೀತ್ಯಾ ಪ್ರಕಟಣೆಗಳನ್ನು ಹೊಂದಿದ್ದು, ಪದೋನ್ನತಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ್ದು, ಈ ಅಂಶವನ್ನು ಮಾನ್ಯ ಉಚ್ಛ ನ್ಯಾಯಾಲಯವು ಸಹ ಒಪ್ಪಿರುತ್ತದೆಂದು ತಿಳಿಸಿರುತ್ತಾರೆ. ಆದ್ದರಿಂದ ಡಾ|| ಆದಮ್‌ಅಲಿ ನದಾಫ್ ರವರು ಸಹ ಪ್ರಾಧ್ಯಾಪಕರ ಹುದ್ದೆಗೆ 01-07-2014 ರಿಂದ ಪೂರ್ವಾನ್ವಯವಾಗುವಂತೆ ಪದೋನ್ನತಿ ಹೊಂದಲು ಅರ್ಹರಿರುತ್ತಾರೆ. ಅಂತೆಯೇ ದಿನಾಂಕ: 01-07-2014 ರಿಂದ ಜಾರಿಗೆ ಬರುವಂತೆ ಸಹ ಪ್ರಾಧ್ಯಾಪಕರಾಗಿ ಪದೋನ್ನತಿ ನೀಡಲು ಇವರ ಪ್ರಕರಣವನ್ನು ಪರಿಗಣಿಸಬೇಕಾಗುತ್ತದೆ.

4) ಡಾ|| ಸುನೀಲ ಕುಮಾರ್ ಬಿರಾದಾರ್ ಮತ್ತು ಡಾ|| ಆದಮ್‌ಅಲಿ ನದಾಫ್ ರವರುಗಳು ಸಲ್ಲಿಸಿದ ದಾಖಲೆಗಳ ಪ್ರಕಾರ ಡಾ|| ಆದಮ್‌ಅಲಿ ನದಾಫ್ ರವರು 2016 ರ ಕಿಮ್ಸ್ ಸಹಾಯಕ ಪ್ರಾಧ್ಯಾಪಕರ ಜ್ಯೇಷ್ಠತಾ ಪಟ್ಟಿಯನ್ವಯ ಜ್ಯೇಷ್ಠತೆಯಲ್ಲಿ ಹಿರಿಯರಾಗಿದ್ದು, ದಿನಾಂಕ: 01-07-2014 ರಂದು ಇವರು ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ಹೊಂದಲು ಅರ್ಹರಿರುತ್ತಾರೆ. ಅದೇ ರೀತಿ ಡಾ|| ಸುನೀಲ ಕುಮಾರ್ ಬಿರಾದಾರ್ ರವರು ಸಹ 01-07-2014 ರಂದೇ ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿಗೆ ಅರ್ಹರಾಗಿರುತ್ತಾರೆ.

5) ನಿರ್ದೇಶಕರು, ಕಿಮ್ಸ್, ಹುಬ್ಬಳ್ಳಿ ರವರು ತಯಾರಿಸಿರುವ ಸಹಾಯಕ ಪಾಧ್ಯಾಪಕರ ಜ್ಯೇಷ್ಠತಾ ಪಟ್ಟಿಯ ಪ್ರಕಾರ ಈ ಇಬ್ಬರು ವೈದ್ಯರುಗಳು 2008 ನೇ ಸಾಲಿನಲ್ಲಿ ಸೇವೆಗೆ ಸೇರಿರುವುದು ಕಂಡು ಬರುತ್ತದೆ. ಡಾ|| ಸುನೀಲ ಕುಮಾರ್ ಬಿರಾದಾರ್ ರವರ ವಾದವೇನೆಂದರೆ, ಸೆಪ್ಟೆಂಬರ್-2012 ರಲ್ಲಿ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯು ಸಹ ಪ್ರಾಧ್ಯಾಪಕರ ಹುದ್ದೆ ಖಾಲಿ ಇದ್ದರೂ ಹಾಗೂ ಅರ್ಹತೆ ಇದ್ದರೂ ಸಹ ಆ ಸಮಯದಲ್ಲಿ ತಮ್ಮ ಹೆಸರನ್ನು ಪರಿಗಣಿಸಿರುವುದಿಲ್ಲ ಎಂಬುದಾಗಿರುತ್ತದೆ.

..3

Scanned with CamScanner

ಕರ್ನಾಟಕ ಸರ್ಕಾರ

# ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ-22.

# KARNATAKA INSTITUTE OF MEDICAL SCIENCES, HUBLI-22

E-mail : directorkims@rediffmail.com / kims_hubli@rediffmail.com Tel.: 0836 237 3348 Fax: 0836 237 3724 Website : www.kimshubli.org

ಪ. ಸಂಖ್ಯೆ
Ref. No.



ದಿನಾಂಕ
Date

6) ದಿನಾಂಕ 01-07-2014 ಕ್ಕೆ ಒಂದು ಸಹ ಪ್ರಾಧ್ಯಾಪಕರ ಹುದ್ದೆಯು ಖಾಲಿ ಇದ್ದು, ಈ ಹುದ್ದೆಗೆ ಅರ್ಹ ಮತ್ತು ಸೇವಾ ಜೇಷ್ಠತೆಯನ್ನು ಹೊಂದಿರುವ ಸಹಾಯಕ ಪ್ರಾಧ್ಯಾಪಕರನ್ನು ಪೂರ್ವಾನ್ವಯವಾಗಿ ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಲು ಪರಿಗಣಿಸಬೇಕಾಗಿರುತ್ತದೆ. ಅದರಂತೆ ಡಾ॥ ಆದಮ್‌ಅಲಿ ನದಾಫ್ ರವರನ್ನು ನಿಸ್ಸಂಶಯವಾಗಿ ಪದೋನ್ನತಿಗೆ ಪರಿಗಣಿಸಬೇಕಾಗಿದೆ.

7) ಮುಂದುವರೆದು, ಡಾ॥ ಗಜಾನನ ನಾಯಕ್, ಸಹ ಪ್ರಾಧ್ಯಾಪಕರು, ನ್ಯಾಯವೈದ್ಯ ಶಾಸ್ತ್ರ ವಿಭಾಗ ರವರಿಗೆ ದಿನಾಂಕ 01-06-2015 ರಂದು ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡಿದ್ದರಿಂದ ಮತ್ತೊಂದು ಸಹ ಪ್ರಾಧ್ಯಾಪಕರ ಹುದ್ದೆಯು ಖಾಲಿ ಆಗಿದ್ದು, ಈ ಹುದ್ದೆಗೆ ಡಾ॥ ಸುನಿಲ ಕುಮಾರ್ ಬಿರಾದಾರ್ ರವರನ್ನು 01-06-2015 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಪದೋನ್ನತಿ ನೀಡಲು ಪರಿಗಣಿಸಬೇಕಾಗಿದೆ.

ಮೇಲ್ಕಂಡ ಅಂಶಗಳನ್ನು ಇಲಾಖಾ ಮುಂಬಡ್ತಿ ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಕಿಮ್ಸ್/ಸಿಬಿ(1)ಬಿ/36/2016-17, ದಿನಾಂಕ: 28-05-2016**

ಪ್ರಸ್ತಾವನೆಯ ಕೂಲಂಕಷ ಪರಿಶೀಲನೆಯ ನಂತರ ಡಾ॥ ಆದಮ್‌ಅಲಿ ನದಾಫ್, ಸಹಾಯಕ ಪ್ರಾಧ್ಯಾಪಕರು, ನ್ಯಾಯವೈದ್ಯ ಶಾಸ್ತ್ರ ವಿಭಾಗ ರವರು ಸೇವಾ ಜ್ಯೇಷ್ಠತೆಯಲ್ಲಿ ಹಿರಿಯರಾಗಿದ್ದು, ಪದೋನ್ನತಿ ಹೊಂದಲು ಅರ್ಹತೆ ಹೊಂದಿರುವುದರಿಂದ, ಸದರಿ ವಿಭಾಗದಲ್ಲಿ ಖಾಲಿ ಇದ್ದ ಸಹ ಪ್ರಾಧ್ಯಾಪಕರ ಹುದ್ದೆಗೆ ದಿನಾಂಕ: 01-07-2014 ರಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ.37400-67000+ಎಜಿಪಿ 9000/- ರಂತೆ ಪೂರ್ವಾನ್ವಯವಾಗಿ ಪದೋನ್ನತಿ ನೀಡಿದೆ. ಹಾಗೂ ಡಾ॥ ಸುನೀಲ ಕುಮಾರ್ ಬಿರಾದಾರ್, ಸಹಾಯಕ ಪ್ರಾಧ್ಯಾಪಕರು, ನ್ಯಾಯವೈದ್ಯ ಶಾಸ್ತ್ರ ವಿಭಾಗ ರವರು ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ಹೊಂದಲು ಅರ್ಹರಿರುವುದರಿಂದ ದಿನಾಂಕ: 01-06-2015 ರಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ ರೂ.37400-67000+ಎಜಿಪಿ 9000/- ರಂತೆ ಪೂರ್ವಾನ್ವಯವಾಗಿ ಪದೋನ್ನತಿ ನೀಡಿ ಆದೇಶಿಸಿದೆ.

(ಎಂ.ಲಕ್ಷ್ಮಿನಾರಾಯಣ)
ಅಧ್ಯಕ್ಷರು,
ಇಲಾಖಾ ಮುಂಬಡ್ತಿ ಸಮಿತಿ,
ಕಿಮ್ಸ್, ಹುಬ್ಬಳ್ಳಿ

ಇವರಿಗೆ,

1) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು.

Scanned with CamScanner

2) ನಿರ್ದೇಶಕರು, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ
3) ಮುಖ್ಯ ಆಡಳಿತಾಧಿಕಾರಿಗಳು, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ.
4) ವೈದ್ಯಕೀಯ ಅಧೀಕ್ಷಕರು, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ.
5) ಪ್ರಾಂಶುಪಾಲರು, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ.
6) ಆರ್ಥಿಕ ಸಲಹೆಗಾರರು, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ.
7) ಸಂಬಂಧಿಸಿದ ವೈದ್ಯರುಗಳಿಗೆ
8) ಹೆಚ್ಚುವರಿ ಪ್ರತಿಗಳು

Scanned with CamScanner